
# ಶ್ರೀಮಾತೆ ಶಾರದಾದೇವಿ


ಕಥೆ : **ಸ್ವಾಮಿ ವಿಮೂರ್ತಾನಂದ** ಭಾಗ-೧ ಚಿತ್ರ : **ಮಣಿಸೆಲ್ವನ್**













ಅವಳಿಗೆ ಐದು ವರ್ಷವಾದಾಗ ಶ್ರೀರಾಮಕೃಷ್ಣರೊಂದಿಗೆ ಅವಳ ವಿವಾಹವಾಯಿತು. ಆಗ ಶ್ರೀರಾಮಕೃಷ್ಣರು ದಕ್ಷಿಣೇಶ್ವರದ ಕಾಳೀದೇವಾಲಯದಲ್ಲಿ ಅರ್ಚಕರಾಗಿದ್ದರು. ಆಗ ಅವರು ತೀವ್ರತರ ಆಧ್ಯಾತ್ಮಿಕ ಸಾಧನೆ ಮಾಡುತ್ತಿದ್ದರು.
ಶ್ರೀರಾಮಕೃಷ್ಣರ ಹಾಗೂ ಶಾರದೆಯ ನಡುವೆ ಇದ್ದ ಸಂಬಂಧ ದೈಹಿಕವಾಗಿರ ಅಲ್ಲ; ಅದು ಆಧ್ಯಾತ್ಮಿಕ ಸಂಬಂಧವಾಗಿತ್ತು . ಶ್ರೀರಾಮಕೃಷ್ಣರು ಶಾರದೆಗೆ ಅನೇಕ ಆಧ್ಯಾತ್ಮಿಕ ಸಾಧನೆಗಳನ್ನು ಕಲಿಸಿಕೊಟ್ಟರು.


ಶ್ರೀರಾಮಕೃಷ್ಣರು ಹಲವು ಬಗೆಯ ಆಧ್ಯಾತ್ಮಿಕ ಸಾಧನೆಗಳಲ್ಲಿ ನಿರತರಾಗಿದ್ದರು. ಆದರೆ ಜನರು ಅವರಿಗೆ ಹುಚ್ಚು ಹಿಡಿದಿದೆಯೆಂದೇ ತಿಳಿದರು. ಈ ಸುದ್ದಿ ಶಾರದೆಯ ಕಿವಿಗೂ ಬಿತ್ತು . ಪತ್ನಿಯಾಗಿ ತಾನು ಪತಿಯೊಂದಿಗಿದ್ದು ಅವರ ಸೇವೆ ಮಾಡಬೇಕೆಂದು ತಿಳಿದು, ಶಾರದೆ ದಕ್ಷಿಣೇಶ್ವರಕ್ಕೆ ಹೊರಟಳು. ಕಾಲುನಡಿಗೆಯ ಈ ಪ್ರಯಾಣದ ನಡುವೆ ಅವಳಿಗೆ ಜ್ವರ ಬಂತು.
ಅಮ್ಮ , ನಾನು ಈವರೆಗೆ ನಿನ್ನನ್ನು ನೋಡಿಲ್ಲ. ನೀನು ಯಾರು?
ನಾನು ನಿನ್ನ ಸೋದರಿ.
ಚಿಂತಿಸಬೇಡ. ನಿನಗೆ ಬೇಗನೆ ವಾಸಿಯಾಗುವುದು. ಇಲ್ಲಿಯ ತನಕ ನಾನು ದಕ್ಷಿಣೇಶ್ವರದಲ್ಲಿ ನಿನ್ನ ಪತಿಯನ್ನು ನೋಡಿಕೊಳ್ಳುತ್ತಿದ್ದೆ.


ಶಾರದೆ ಸುರಕ್ಷಿತವಾಗಿ ದಕ್ಷಿಣೇಶ್ವರವನ್ನು ತಲುಪಿದಳು. ಶ್ರೀರಾಮ ಕೃಷ್ಣರು ಅವಳನ್ನು ಸ್ವಾಗತಿಸಿದರು. ಜನರು ಶ್ರೀರಾಮಕೃಷ್ಣರ ಬಗ್ಗೆ ಆಡಿಕೊಳ್ಳುತ್ತಿದ್ದ ಮಾತುಗಳು ಸುಳ್ಳು ಎಂದು ಅವರ ನಡವಳಿಕೆಯಿಂದ ಅವಳಿಗೆ ತಿಳಿಯಿತು. .
ಶಾರದೆ, ನನ್ನನ್ನು ಪ್ರಪಂಚಕ್ಕೆ ಎಳೆಯಲು ಬಂದಿರುವೆಯಾ?
ಇಲ್ಲ, ನಾನು ನಿಮ್ಮ ಆಧ್ಯಾತ್ಮಿಕ ಮಾರ್ಗದಲ್ಲಿ ಸಹಕಾರ ನೀಡಲು ಬಂದಿರುವೆ.
ಮುಂದಿನ ಹದಿಮೂರು ವರ್ಷಗಳ ಕಾಲ ಶಾರದೆ ದಕ್ಷಿಣೇಶ್ವರದ ನಹಬತ್ ಎಂಬ ಒಂದು ಸಣ್ಣ ಕೋಣೆಯಲ್ಲಿ ವಾಸವಾಗಿದ್ದಳು. ಅತ್ಯಂತ ತಪಸ್ಸಿನ ಜೀವನ ಅವಳದಾಗಿತ್ತು. ಅವಳು ಶ್ರೀರಾಮಕೃಷ್ಣರ ಸೇವೆ ಮಾಡುತ್ತಿದ್ದಳು; ಅದರೊಂದಿಗೆ ಅವರ ಬಂಧುಗಳ, ಭಕ್ತರ ಸೇವೆಯನ್ನು ಉಲ್ಲಾಸದಿಂದ ಮಾಡುತ್ತಿದ್ದಳು.


ಒಂದು ದಿನ ಶ್ರೀರಾಮಕೃಷ್ಣರು ಶಾರದೆಗೆ ಹೇಳಿದರು. . . .
ನಮ್ಮ ಸುತ್ತ ಮುತ್ತ ಇರುವವರೊಂದಿಗೆ ನಾವು ಹೇಗೆ ವರ್ತಿಸುತ್ತೇವೆ, ಅವರೊಂದಿಗೆ ಹೇಗೆ ಸಂಬಂಧವನ್ನು ಇಟ್ಟುಕೊಂಡಿದ್ದೇವೆ ಎಂಬುದು ನಾವು ಎಷ್ಟರಮಟ್ಟಿಗೆ ಶಾಂತಿ ಹೊಂದಿದ್ದೇವೆ, ಸಫಲರಾಗಿದ್ದೇವೆ ಎಂಬು ದನ್ನು ತಿಳಿಸಿಕೊಡುತ್ತದೆ.
ಅವರಿಬ್ಬರೂ ಸದಾ ಉನ್ನತ ಆಧ್ಯಾತ್ಮಿಕ ಹಂತದಲ್ಲಿರುತ್ತಿದ್ದರು.
ನೀವು ನನ್ನನ್ನು ಯಾವ ದೃಷ್ಟಿಯಿಂದ ನೋಡುತ್ತೀರಿ?
ನಿನ್ನನ್ನು ನಾನು ಜಗನ್ಮಾತೆಯೆಂದೇ ನೋಡುತ್ತೇನೆ. ದೇವಾಲಯದಲ್ಲಿರುವ ಜಗನ್ಮಾತೆ, ನನಗೆ ಜನ್ಮ ನೀಡಿದ ತಾಯಿ ಹಾಗೂ ನೀನು – ಮೂವರೂ ನನಗೆ ಒಂದೇ ಆಗಿದ್ದೀರಿ.
ಶ್ರೀಶಾರದಾದೇವಿಯವರು ತಮಗೆ ಶ್ರೀರಾಮಕೃಷ್ಣರು ಕಲಿಸಿದ ಆಧ್ಯಾತ್ಮಿಕ ಸಾಧನೆಗಳನ್ನೆಲ್ಲ ಅಭ್ಯಾಸ ಮಾಡಿದರು. ಕೆಲವೊಮ್ಮೆ ಅವರು ಕೋಣೆಯ ಹೊರಗಿನ ಮೆಟ್ಟಿಲ ಮೇಲೆ ಕುಳಿತು ಧ್ಯಾನ, ಜಪ ಮಾಡುತ್ತಿದ್ದರು. ಒಂದು ದಿನ ಅವರು ಅಂಬಿಗನೊಬ್ಬನ ಹಾಡನ್ನು ಕೇಳುತ್ತ ಸಮಾಧಿಯ ಸ್ಥಿತಿಗೇರಿದರು.
ದೇವರೇ, ಚಂದ್ರನಲ್ಲೂ ಕಲೆಗಳಿವೆ. ಆದರೆ ನನ್ನ ಮನಸ್ಸಿನಲ್ಲಿ ಎಂದಿಗೂ ಕಳಂಕವಿಲ್ಲದಂತೆ ನನ್ನ ಮನಸ್ಸನ್ನು ಶುದ್ಧವಾಗಿ ಇರಿಸು.


ಶ್ರೀರಾಮಕೃಷ್ಣರು ಫಲಹಾರಿಣಿ ಕಾಳೀಪೂಜೆಯಂದು ಶಾರದಾದೇವಿಯವರನ್ನು ದೇವಿ ಷೋಡಶಿಯೆಂದು ಪೂಜಿಸಿದರು. ಅವರು ತಮ್ಮ ಸಾಧನೆ ಎಲ್ಲ ಫಲಗಳನ್ನು ಅವರ ಪಾದಗಳಲ್ಲಿ ಸಮರ್ಪಿಸಿದರು.
ಜಗನ್ಮಾತೆ, ತ್ರಿಪುರಸುಂದರಿ, ದಯವಿಟ್ಟು ನೀನು ಇವಳ ಮೂಲಕ ಪ್ರಕಟವಾಗು!
ಪೂಜೆಯ ನಂತರ ಶಾರದಾದೇವಿಯವರು ತಮ್ಮ ದೈನಂದಿನ ಕೆಲಸಗಳನ್ನು ಮುಂದುವರಿಸಿದರು. ಅವರು ಎಲ್ಲರಿಗೂ ತಾಯಿಯಾಗಿದ್ದರು. ಆಧ್ಯಾತ್ಮಿಕ ಸಾಧಕರಿಗೆ ಅವರು ದಾರಿ ತೋರುವ ಕಾರ್ಯವನ್ನು ಸಮರ್ಥವಾಗಿ ಮಾಡಬಲ್ಲರೆಂಬುದು ಶ್ರೀರಾಮಕೃಷ್ಣರಿಗೆ ತಿಳಿದಿತ್ತು. ಹೀಗಾಗಿ ಅವರು ಎಲ್ಲ ಜಪ, ಧ್ಯಾನಗಳ ಜ್ಞಾನವನ್ನು ಅವರಿಗೆ ನೀಡಿದರು. ಅವರು ಶಾರದಾದೇವಿಯವರಿಗೆ ಹೇಳಿದರು...
ನೀನು ಜನರಿಗೆ ಮಾರ್ಗದರ್ಶನ ನೀಡಿ, ದಾರಿ ತೋರಿಸಿ ಕೊಡಬೇಕು!
ಮುಂದಿನ ಸಂಚಿಕೆಗೆ...